# ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು

(ಕರ್ನಾಟಕ ಸರ್ಕಾರದ ಅಧೀನದ ಸ್ವಾಯತ್ತ ಸಂಸ್ಥೆ)

ವಿಕ್ಟೋರಿಯಾ ಆಸ್ಪತ್ರೆ ಆವರಣ, ಕೋಟೆ, ಬೆಂಗಳೂರು –560 002.

gdcribangalore@gmail.com


ಸಂಖ್ಯೆ:ಸದಂಕಾಸಂಸಂ/ಸರಬ/53/2016–17

ನಿರ್ದೇಶಕರು ಮತ್ತು ಡೀನ್‌ರವರ ಕಾರ್ಯಾಲಯ,
ದಿನಾಂಕ:15.04.2017

## ಟೆಂಡರ್ ಅಧಿಸೂಚನೆ

ವಿಷಯ:– ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿರುವ ಅನುಪಯುಕ್ತ ವಸ್ತುಗಳನ್ನು ವಿಲೇವಾರಿ ಮಾಡುವ ಕುರಿತು

---**---

ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಸಂಸ್ಥೆಯಲ್ಲಿನ ಅನುಪಯುಕ್ತ ವಸ್ತುಗಳನ್ನು ಟೆಂಡರ್ ಕಂ ಹರಾಜು ಮೂಲಕ ವಿಲೇವಾರಿ ಮಾಡಲು ಟೆಂಡರ್ ಅಧಿಸೂಚನೆ ಹೊರಡಿಸಲಾಗಿದೆ.

| ಕ್ರಮ ಸಂಖ್ಯೆ | ಅನುಪಯುಕ್ತ ವಸ್ತುಗಳ ವಿವರ | ಪರಿಮಾಣ |
|---|---|---|
| 1 | ಪ್ಲ್ಯಾಸ್ಟಿಕ್ ಪೈಪುಗಳು | ಒಂದು ಗುಂಪು |
| 2 | ಅನುಪಯುಕ್ತ ಕಬ್ಬಿಣದ ಸರಳುಗಳು,ಪೈಪುಗಳು ಹಾಗೂ ಜಾಲರಿಯ ಬಾಗಿಲುಗಳು | ಒಂದು ಗುಂಪು |

ಮೇಲ್ಕಂಡ ಅನುಪಯುಕ್ತ ವಸ್ತುಗಳನ್ನು ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಸಂಸ್ಥೆಯ ಆವರಣದಲ್ಲಿ ಇಡಲಾಗಿದೆ. ಸದರಿ ಅನುಪಯುಕ್ತ ವಸ್ತುಗಳನ್ನು ಆಸಕ್ತ ಬಿಡ್‌ದಾರರು ಸಾರ್ವಜನಿಕರು ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ದಿನಾಂಕ:15.04.2017 ರಿಂದ 02.05.2017ರವರೆಗೆ ಬೆಳಿಗ್ಗೆ 09.30 ಗಂಟೆವರೆಗೆ ಪರಿಶೀಲಿಸಬಹುದು. ಆಸಕ್ತರು ಬಿಡ್ಡಿನ ನಿಗದಿತ ಅರ್ಜಿ ನಮೂನೆ, ನಿಬಂಧನೆ ಮತ್ತು ಷರತ್ತುಗಳ ವಿವರಗಳನ್ನು ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ ಸಂಸ್ಥೆಯ https://www.karnataka.gov.in/gdcrib/pages/home.aspx ವೆಬ್‌ಸೈಟ್‌ನಿಂದ ಪಡೆಯಬಹುದು. ಆಸಕ್ತರು ತಮ್ಮ ಬಿಡ್‌ಗಳನ್ನು ದಿನಾಂಕ:02.05.2017 ಬೆಳಿಗ್ಗೆ 11.00 ಗಂಟೆಯೊಳಗೆ ಈ ಕಛೇರಿಗೆ ಸಲ್ಲಿಸಬೇಕು.

ಸಹಿ/-

ಡೀನ್ ಮತ್ತು ನಿರ್ದೇಶಕರು,
ಸರ್ಕಾರಿ ದಂತ ಕಾಲೇಜು ಮತ್ತು
ಸಂಶೋಧನಾ ಸಂಸ್ಥೆ, ಬೆಂಗಳೂರು.

**ಪ್ರತಿಯನ್ನು ತಮ್ಮ ಸಂಸ್ಥೆಯ ಸೂಚನಾ ಫಲಕದಲ್ಲಿ ಪ್ರಚಾರಕ್ಕಾಗಿ ಪ್ರಕಟಿಸಲು ಕೋರಲಾಗಿದೆ.**

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈದ್ಯಕೀಯ ಶಿಕ್ಷಣ) ಬಹುಮಹಡಿಗಳ ಕಟ್ಟಡ, ಬೆಂಗಳೂರು.
2) ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು.
3) ನಿರ್ದೇಶಕರು, ಕಾರ್ಮಿಕ ವಿಮಾ ಸೇವೆಗಳು, ಬೆಂಗಳೂರು.
4) ವೈದ್ಯಕೀಯ ಅಧೀಕ್ಷಕರು: ವಿಕ್ಟೋರಿಯಾ ಆಸ್ಪತ್ರೆ: ವಾಣಿ ವಿಲಾಸ್ ಆಸ್ಪತ್ರೆ: ಬೌರಿಂಗ್ ಆಸ್ಪತ್ರೆ: ಕೆ.ಸಿ.ಜನರಲ್ ಆಸ್ಪತ್ರೆ: ಮಿಂಟೋ ಆಸ್ಪತ್ರೆ, ಬೆಂಗಳೂರು.

5) ಡೀನ್ ಕಂ ನಿರ್ದೇಶಕರು, ಬೆಂಗಳೂರು ವೈದ್ಯಕೀಯ ವಿದ್ಯಾಲಯ, ಬೆಂಗಳೂರು.
6) ನಿರ್ದೇಶಕರು, ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆ, ಬೆಂಗಳೂರು.
7) ನಿರ್ದೇಶಕರು, ನಿಮ್ಹಾನ್ಸ್ ಆಸ್ಪತ್ರೆ, ಬೆಂಗಳೂರು.
8) ನಿರ್ದೇಶಕರು, ಸಂಜಯಗಾಂಧಿ ಸಂಶೋಧನಾ ಮತ್ತು ಅಪಘಾತ ಆಸ್ಪತ್ರೆ, ಬೆಂಗಳೂರು.
9) ನಿರ್ದೇಶಕರು, ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆ, ಬೆಂಗಳೂರು.
10) ನಿರ್ದೇಶಕರು, ಶ್ರೀ ಜಯದೇವ ಹೃದ್ರೋಗ ಸಂಸ್ಥೆ, ಬೆಂಗಳೂರು.
11) ನಿರ್ದೇಶಕರು, ಎಸ್.ಡಿ.ಎಸ್ ಕ್ಷಯ ಮತ್ತು ರಾಜೀವ್ ಗಾಂಧಿ ಎದೆ ರೋಗಗಳ ಸಂಸ್ಥೆ, ಬೆಂಗಳೂರು.
12) ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಆನಂದರಾವ್ ವೃತ್ತ, ಬೆಂಗಳೂರು.
13) ನಿರ್ದೇಶಕರು, ಕರ್ನಾಟಕ ಮಧುಮೇಹ ಸಂಸ್ಥೆ, ಎಸ್.ಜೆಐಸಿಆರ್ ಆವರಣ, ಬೆಂಗಳೂರು.
14) ಸಂಸ್ಥೆಯ ಸೂಚನಾ ಫಲಕ
15) ಕಛೇರಿ ಪ್ರತಿ.

ಡೀನ್ ಮತ್ತು ನಿರ್ದೇಶಕರು,
ಸರ್ಕಾರಿ ದಂತ ಕಾಲೇಜು ಮತ್ತು
ಸಂಶೋಧನಾ ಸಂಸ್ಥೆ, ಬೆಂಗಳೂರು.

# ಟೆಂಡರ್ ಕಮ್ ಹರಾಜು ನಿಬಂಧನೆ ಮತ್ತು ಷರತ್ತುಗಳು

1) ಅನುಪಯುಕ್ತ ವಸ್ತುಗಳ ವಿಲೇವಾರಿ ಟೆಂಡರ್ ಕಂ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವ ಆಸಕ್ತ ಬಿಡ್‌ದಾರರು ನಿಗದಿತ ಅರ್ಜಿ ನಮೂನೆಯನ್ನು ಹಾಗೂ ಟೆಂಡರ್ ನಿಬಂಧನೆ ಮತ್ತು ಷರತ್ತುಗಳನ್ನು ಸಂಸ್ಥೆಯ https://www.karnataka.gov.in/gdcrib/pages/home.aspx ವೆಬ್‌ಸೈಟ್‌ನಲ್ಲಿ/ ಕಛೇರಿಯಲ್ಲಿ ಪಡೆದುಕೊಳ್ಳತಕ್ಕದ್ದು.

2) ಆಸಕ್ತಿಯುಳ್ಳ ಬಿಡ್‌ದಾರರು ಅನುಪಯುಕ್ತ ವಸ್ತುಗಳನ್ನು ಖರೀದಿಸಲು ಅರ್ಜಿ ಶುಲ್ಕವಾಗಿ ಡಿಡಿ ರೂ.200/- ಗಳನ್ನು ಡೀನ್ ಕಮ್ ನಿರ್ದೇಶಕರು, ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇವರ ಹೆಸರಿನಲ್ಲಿ ಪಡೆದು ಟೆಂಡರ್ ನಮೂನೆಯನ್ನು ಭರ್ತಿ ಮಾಡಿ, ಸೀಲ್ ಮಾಡಿ ದಿನಾಂಕ:02.05.2017ರಂದು ಬೆಳಿಗ್ಗೆ 11.00 ಗಂಟೆಯೊಳಗೆ ಅರ್ಜಿ ಶುಲ್ಕದೊಂದಿಗೆ ನಿರ್ದೇಶಕರು, ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಸಲ್ಲಿಸತಕ್ಕದ್ದು. ಅರ್ಜಿ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

3) ಟೆಂಡರ್ ಅರ್ಜಿ ಜೊತೆ ಠೇವಣಿಯಾಗಿ ರೂ.3,000/-ಗಳ ಡಿ.ಡಿಯನ್ನು ಡೀನ್ ಕಂ ನಿರ್ದೇಶಕರ ಹೆಸರಿನಲ್ಲಿ ಪಡೆದು ಸಲ್ಲಿಸತಕ್ಕದ್ದು.

4) ಟೆಂಡರ್‌ನಲ್ಲಿ ಯಶಸ್ವಿಯಾಗದವರಿಗೆ ಠೇವಣಿ ಹಣ ಕೂಡಲೇ ವಾಪಸ್ ಕೊಡಲಾಗುವುದು.

5) ಟೆಂಡರ್ ಲಕೋಟೆಯನ್ನು ತೆರೆಯುವ ದಿನಾಂಕ: 02.05.2017ರಂದು ಮಧ್ಯಾಹ್ನ 12.00 ಗಂಟೆಗೆ ಡೀನ್ ಕಮ್ ನಿರ್ದೇಶಕರ ಕೊಠಡಿ.

6) ಡೀನ್ ಕಂ ನಿರ್ದೇಶಕರು, ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ರವರ ಮೇಲು ಉಸ್ತುವಾರಿಯಲ್ಲಿ ಅಥವಾ ಅವರಿಂದ ನೇಮಿಸಲ್ಪಟ್ಟ ಅಧಿಕಾರಿಗಳ ಉಸ್ತುವಾರಿಯಲ್ಲಿ ಅನುಪಯುಕ್ತ ವಸ್ತುಗಳ ವಿಲೇವಾರಿಯ ಕೆಲಸವನ್ನು ನಡೆಸುವರು. ಟೆಂಡರ್‌ನಲ್ಲಿ ಭಾಗವಹಿಸುವ ಬಿಡ್ಡುದಾರರು ಅನುಪಯುಕ್ತ ವಸ್ತುಗಳಿಗೆ ತಮ್ಮ ಬೆಲೆಯ ಬಿಡ್ಡನ್ನು ಅರ್ಜಿ ನಮೂನೆಯಲ್ಲಿಯೇ ಭರ್ತಿ ಮಾಡಿ ಸಲ್ಲಿಸತಕ್ಕದ್ದು.

7) ಯಶಸ್ವಿಯಾದ ಬಿಡ್ಡುದಾರರು ಒಟ್ಟು ಮೊತ್ತದಲ್ಲಿ ಶೇಕಡ 50 ರಷ್ಟು ಮೊತ್ತವನ್ನು ಕೂಡಲೇ ಡೀನ್ ಕಂ ನಿರ್ದೇಶಕರು, ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ರವರ ಕಛೇರಿಯ ನಗದು ವಿಭಾಗದಲ್ಲಿ ಪಾವತಿ ಮಾಡತಕ್ಕದ್ದು, ವಿಲೇವಾರಿ ಆದೇಶ ಪತ್ರ ಬಿಡ್ಡುದಾರರಿಗೆ ತಲುಪಿದ ಒಂದು ದಿನಗಳೊಳಗೆ ಬಾಕಿ ಶೇಕಡ 50ರಷ್ಟು ಮೊತ್ತ ಮತ್ತು ತೆರಿಗೆ ಹಣವನ್ನು ಪಾವತಿ ಮಾಡತಕ್ಕದ್ದು ನಂತರ ಅನುಪಯುಕ್ತ ವಸ್ತುಗಳನ್ನು ತೆಗೆದುಕೊಳ್ಳದಿದ್ದಲ್ಲಿ ಬಿಡ್ಡುದಾರರ ಬಿಡ್ಡನ್ನು ರದ್ದುಗೊಳಿಸಲಾಗುವುದು ಹಾಗೂ ಅನುಪಯುಕ್ತ ವಸ್ತುಗಳನ್ನು ಮಾರಾಟ ಮಾಡುವುದಕ್ಕೆ ಪ್ರತ್ಯೇಕವಾಗಿ ಕ್ರಮವನ್ನು ತೆಗೆದುಕೊಳ್ಳಲಾಗುವುದು.

8) ಎಲ್ಲಾ ನಗದು ಪಾವತಿಗಳನ್ನು ಡೀನ್ ಕಂ ನಿರ್ದೇಶಕರು, ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ರವರ ನಗದು ವಿಭಾಗದಲ್ಲಿ ಮಾತ್ರ ಪಾವತಿ ಮಾಡತಕ್ಕದ್ದು.

9) ಬಿಡ್ಡುದಾರರು ಪಾವತಿ ಮಾಡಿರುವ ಠೇವಣಿ ಹಣವನ್ನು ಅನುಪಯುಕ್ತ ವಸ್ತುಗಳ ಬಾಕಿ ಇರುವ ಶೇಕಡ 50 ರಷ್ಟು ಮೊತ್ತಕ್ಕೆ ಹೊಂದಾಣಿಕೆ ಮಾಡಲಾಗುವುದಿಲ್ಲ. ಬಿಡ್ಡುದರರು ಎಲ್ಲಾ ನಿಬಂಧನೆ ಮತ್ತು ಷರತ್ತುಗಳನ್ನು ಪೂರೈಸಿ ಅನುಪಯುಕ್ತ ವಸ್ತುಗಳನ್ನು ತಮ್ಮ ವಶಕ್ಕೆ ಪಡೆದ ನಂತರ ಠೇವಣಿ ಮೊತ್ತ ರೂ.3,000/-ಗಳನ್ನು ಲೆಕ್ಕ ಶಾಖೆಯಿಂದ ವಾಪಸ್ ಪಡೆಯಬಹುದಾಗಿದೆ.

10) ಡೀನ್ ಕಂ ನಿರ್ದೇಶಕರು ಹಾಗೂ ಉಗ್ರಣಾಧಿಕಾರಿಗಳು, ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ರವರು ಅನುಪಯುಕ್ತ ವಸ್ತುಗಳ ವಿಲೇವಾರಿಯನ್ನು ದೃಢೀಕರಿಸಿದ ನಂತರ ಸಂಬಂಧಪಟ್ಟ ಬಿಡ್ಡುದಾರರಿಗೆ ಅನುಪಯುಕ್ತ ವಸ್ತುಗಳನ್ನು ಕಛೇರಿ ವೇಳೆಯಲ್ಲಿ ಮಾತ್ರ ವಿಲೇವಾರಿ ಮಾಡಲಾಗುವುದು.

11) ಯಶಸ್ವಿಯಾದ ಬಿಡ್ಡುದಾರರು ನಿಗದಿತ ಅವಧಿಯಲ್ಲಿ ಹಣವನ್ನು ಪಾವತಿ ಮಾಡದಿದ್ದಲ್ಲಿ ಅಥವಾ ಈ ಇಲಾಖೆಗೆ ಯಾವುದೇ ರೀತಿಯ ನಷ್ಟ ಉಂಟು ಮಾಡಿದ್ದಲ್ಲಿ ನಷ್ಟದ ಮೊತ್ತವನ್ನು ಠೇವಣಿ ಡಿಪಾಸಿಟ್ ಹಾಗೂ ಪಾವತಿ ಮಾಡಲಾದ ಬಿಡ್ಡಿನ ಶೇಕಡ 50ರಷ್ಟು ಮೊತ್ತವನ್ನು ವಸೂಲಿ ಮಾಡಲಾಗುವುದು ಅಥವಾ ಡಿಪಾಸಿಟ್ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

12) ಮಾರಾಟ ತೆರಿಗೆ ಮತ್ತು ಇತರೆ ಚಾರ್ಜಗಳನ್ನು ಮಾರಾಟದ ದಿನದಂದು ಅನ್ವಯಿಸುವಂತೆ ಪ್ರತ್ಯೇಕವಾಗಿ ಬಿಡ್ಡಿನ ಅಥವಾ ಹರಾಜಿನ ಮೊತ್ತಕ್ಕೆ ವಿಧಿಸಲಾಗುವುದು.

13) ಅನುಪಯುಕ್ತ ವಸ್ತುಗಳನ್ನು ಸ್ಪರ್ಧಾತ್ಮಕ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ಟೆಂಡರ್ ಕಮ್ ಬಹಿರಂಗ ಹರಾಜು ಮೂಲಕ ವಿಲೇವಾರಿ ನಡೆಸಲಾಗುತ್ತದೆ.

14) ಡೀನ್ ಕಂ ನಿರ್ದೇಶಕರು, ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಇವರು ಯಾವುದೇ ಕಾರಣವನ್ನು ನೀಡದೇ ಟೆಂಡರ್ ಸ್ವೀಕರಿಸುವ ಹಾಗೂ ತಿರಸ್ಕರಿಸುವ, ಮುಂದೂಡುವ ಅಥವಾ ರದ್ದುಪಡಿಸುವ ಹಕ್ಕನ್ನು ಹೊಂದಿರುತ್ತಾರೆ. ಡೀನ್ ಕಂ ನಿರ್ದೇಶಕರ ತೀರ್ಮಾನವೇ ಅಂತಿಮವಾಗಿರುತ್ತದೆ. ಮತ್ತು ಅವರ ತೀರ್ಮಾನಕ್ಕೆ ಎಲ್ಲರೂ ಬದ್ದರಾಗಿರುತ್ತಾರೆ.

ಡೀನ್ ಮತ್ತು ನಿರ್ದೇಶಕರು,
ಸರ್ಕಾರಿ ದಂತ ಕಾಲೇಜು ಮತ್ತು
ಸಂಶೋಧನಾ ಸಂಸ್ಥೆ, ಬೆಂಗಳೂರು.